ಕರ್ನಾಟಕ ಸರ್ಕಾರದ ನಡವಳಿ

ವಿಷಯ : ತುಟ್ಟಿಭತ್ಯೆಯ ದರಗಳ ಪರಿಷ್ಕರಣೆ

ಓದಲಾಗಿದೆ : 1. ಸ.ಆ.ಸಂಖ್ಯೆ ಎಫ್‌ಡಿ 17 ಎಸ್‌ಆರ್‌ಪಿ 2007 ದಿ: 16-5-2007
2. ಸ.ಆ.ಸಂಖ್ಯೆ ಎಫ್‌ಡಿ 19 ಎಸ್‌ಆರ್‌ಪಿ 2007 ದಿ: 16-5-2007
3. ಸ.ಆ.ಸಂಖ್ಯೆ ಎಫ್‌ಡಿ 21 ಎಸ್‌ಆರ್‌ಪಿ 2007 ದಿ: 28-5-2007
4. ಸ.ಆ.ಸಂಖ್ಯೆ ಎಫ್‌ಡಿ 42 ಎಸ್‌ಆರ್‌ಪಿ 2007 ದಿ: 27-9-2007
5. ಸ.ಆ.ಸಂಖ್ಯೆ ಎಫ್‌ಡಿ 3 ಎಸ್‌ಆರ್‌ಪಿ 2008 ದಿ: 2-4-2008
6. ಸ.ಆ.ಸಂಖ್ಯೆ ಎಫ್‌ಡಿ 12 ಎಸ್‌ಆರ್‌ಪಿ 2008 ದಿ: 12-11-2008
7. ಸ.ಆ.ಸಂಖ್ಯೆ ಎಫ್‌ಡಿ 05 ಎಸ್‌ಆರ್‌ಪಿ 2009 ದಿ: 19-5-2009
8. ಸ.ಆ.ಸಂಖ್ಯೆ ಎಫ್‌ಡಿ 14 ಎಸ್‌ಆರ್‌ಪಿ 2009 ದಿ: 24-10-2009
9. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಇವರ ಪತ್ರ ಸಂಖ್ಯೆ ಜಿಇಎ 198/2010-11 ದಿನಾಂಕ 29-3-2010

ಆದೇಶ ಸಂಖ್ಯೆ ಎಫ್‌ಡಿ 14 ಎಸ್‌ಆರ್‌ಪಿ 2010 ಬೆಂಗಳೂರು ದಿನಾಂಕ 12ನೇ ಏಪ್ರಿಲ್ 2010

ಸರ್ಕಾರವು ದಿನಾಂಕ 1ನೇ ಜನವರಿ 2010 ರಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರಿ ನೌಕರರಿಗೆ 2007ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಹಾಲಿ ಲಭ್ಯವಿರುವ ತುಟ್ಟಿಭತ್ಯೆಯ ದರವನ್ನು ಮೂಲ ವೇತನದ ಶೇ.38 ರಿಂದ ಶೇ.46ಕ್ಕೆ ಹೆಚ್ಚಿಸಿ ಮಂಜೂರು ಮಾಡಿದೆ.

2. ಈ ಆದೇಶದ ಮೇರೆಗೆ ಮಂಜೂರಾಗಿರುವ ತುಟ್ಟಿಭತ್ಯೆಯನ್ನು ನಗದಾಗಿ ಮುಂದಿನ ಆದೇಶ ಹೊರಡಿಸುವವರಗೆ ಪಾವತಿ ಮಾಡಲಾಗುವುದು.

3. ಸರ್ಕಾರದ ಮತ್ತು ಜಿಲ್ಲಾ ಪಂಚಾಯತ್‌ಗಳ ಪೂರ್ಣಾವಧಿ ನೌಕರರಿಗೆ, ಕಾಲಿಕ ವೇತನ ಶ್ರೇಣಿಗಳಲ್ಲಿ ರುವ ಪೂರ್ಣಾವಧಿ ವರ್ಕ್‌ಚಾರ್ಜ್ ನೌಕರರಿಗೆ ಹಾಗೂ ಸರ್ಕಾರದಿಂದ ಸಹಾಯಾನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ನೌಕರರುಗಳಿಗೆ ಈ ಆದೇಶ ಅನ್ವಯಿಸುತ್ತದೆ.

4. ಈ ಆದೇಶದ ಉದ್ದೇಶಗಳಿಗಾಗಿ ಮೂಲ ವೇತನ ಎಂದರೆ ಸರ್ಕಾರಿ ನೌಕರನು ಧಾರಣ ಮಾಡಿರುವ ಹುದ್ದೆಗೆ ಅನ್ವಯವಾಗುವ 2007ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪಡೆಯುವ ವೇತನ ಮತ್ತು ಅದರಲ್ಲಿ :

(ಅ) ವೇತನ ಶ್ರೇಣಿಯ ಗರಿಷ್ಟಕ್ಕಿಂತ ಹೆಚ್ಚಾಗಿ ಅವನಿಗೆ ಸ್ಥಗಿತ ವೇತನ ಬಡ್ತಿಯನ್ನು ನೀಡಲಾಗಿದ್ದರೆ, ಆ ಸ್ಥಗಿತ ವೇತನ ಬಡ್ತಿ

(ಆ) 2007ರ ಕರ್ನಾಟಕ ಸರ್ಕಾರಿ ಸೇವಾ (ಪರಿಷ್ಕೃತ ವೇತನ) ನಿಯಮಗಳ 7ನೇ ನಿಯಮದ (3)ನೇ ಉಪನಿಯಮದ ಮೇರೆಗೆ ಅವನಿಗೆ ನೀಡಲಾದ ವೈಯುಕ್ತಿಕ ವೇತನ ಯಾವುದಾದರೂ ಇದ್ದರೆ, ಆ ವೈಯಕ್ತಿಕ ವೇತನ ಸೇರುತ್ತದೆ.

5. ಮೂಲ ವೇತನಕ್ಕೆ ಮೇಲೆ ಸೂಚಿಸಿರುವುದನ್ನು ಹೊರತುಪಡಿಸಿ ಇತರೆ ಯಾವುದೇ ಉಪಲಬ್ದಗಳನ್ನು ಸೇರಿಸತಕ್ಕದಲ್ಲ.

6. ತುಟ್ಟಿಭತ್ಯೆಯ ಕಾರಣದಿಂದ ಸಂದಾಯ ಮಾಡಬೇಕಾಗಿರುವ ಐವತ್ತು ಪೈಸೆ ಹಾಗೂ ಅದಕ್ಕಿಂತ ಹೆಚ್ಚಿನ ಭಿನ್ನಾಂಕಗಳನ್ನು ಮುಂದಿನ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು ಮತ್ತು ಐವತ್ತು ಪೈಸೆಗಿಂತ ಕಡಿಮೆ ಇರುವ ಭಿನ್ನಾಂಕಗಳನ್ನು ಕಡೆಗಣಿಸತಕ್ಕದ್ದು.

7. ತುಟ್ಟಿಭತ್ಯೆಯನ್ನು ಸಂಭಾವನೆಯ ವಿಶಿಷ್ಟ ಅಂಶವಾಗಿ ತೋರಿಸುವುದು ಮತ್ತು ಯಾವುದೇ ಉದ್ದೇಶಕ್ಕಾಗಿ ಇದನ್ನು ವೇತನ ಎಂದು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ:
(ಕೆ.ಎಸ್.ಗೋಪಾಲಕೃಷ್ಣ)
ಸರ್ಕಾರದ ಉಪಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು-2)

---------------

ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಸಂಖ್ಯೆ ಹನಿಅ/ವಿಭಾಗ-2/ತುಟ್ಟಿಭತ್ಯೆ/2010-11 ದಿನಾಂಕ 15-4-2010

:::: ಸುತ್ತೋಲೆ - 2 ::::

ವಿಷಯ : ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗೆ ತುಟ್ಟಿಭತ್ಯೆ ಮಂಜೂರಾತಿ ಬಗ್ಗೆ.

ಉಲ್ಲೇಖ : 1. ಕಛೇರಿಯ ಟಿಪ್ಪಣಿ ಸಂಖ್ಯೆ ಹನಿಅ/ವಿಭಾಗ-2/ತುಟ್ಟಿಭತ್ಯೆ/2010-11 ದಿನಾಂಕ 13-4-2010

2. ಕುಲಪತಿಗಳ ಅನುಮೋದನೆ ದಿನಾಂಕ 15-4-2010

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 14 ಎಸ್‌ಆರ್‌ಪಿ 2010 ದಿನಾಂಕ 12-4-2010 ರಲ್ಲಿ ಮಂಜೂರು ಮಾಡಿರುವ ತುಟ್ಟಿಭತ್ಯೆಯ ದರವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿ ವರ್ಗದವರಿಗೆ ದಿನಾಂಕ 1-1-2010 ರಿಂದ ಜಾರಿಗೆ ಬರುವಂತೆ ಯಥಾವತ್ತಾಗಿ ವಿಸ್ತರಿಸಲಾಗಿದೆ.

ಹಣಕಾಸು ನಿಯಂತ್ರಣಾಧಿಕಾರಿಗಳು

ಪ್ರತಿ :

1. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿಗಳಿಗೆ
2. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ
3. ಉಪ ಹಣಕಾಸು ನಿಯಂತ್ರಣಾಧಿಕಾರಿಗಳು / ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿಗಳು, ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ, ಜಿಕೆವಿಕೆ.
4. ಕಡತಕ್ಕೆ.